**ಅಸಲು ದಾವ ಸಂಖ್ಯೆಃ 459/2014**

**ಪಿ.ಡಬ್ಲೂ -1**

**ದಿಃ09-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**<u>ಪಾಟೀ ಸವಾಲು 1 ರಿಂದ 3ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಎ.ಜಿ.ಕೆ ರವರಿಂದಃ-</u>**

1. ಮೊದಲು ಈ ದಾವೆಗೆ ಅಸಲು ದಾವಾ ಸಂಖ್ಯೆ 121/96 ಎಂಬ ಸಂಖ್ಯೆ ಇತ್ತು ಎಂದರೆ ಸರಿ. ಸದರಿ ದಾವೆಯನ್ನು ನಾನು ನಡೆಸದ ಕಾರಣ ಅದು ವಜಾಗೊಂಡಿರುತ್ತದೆ ಎಂದರೆ ಸಾಕ್ಷಿಯು ಅದು ಬೇರೆ ಕಾರಣಕ್ಕೆ ವಜಾಗೊಂಡಿರುತ್ತದೆ ಎಂದು ನುಡಿಯುತ್ತಾರೆ. ನಂತರ ಸದರಿ ದಾವೆ ಈ ನ್ಯಾಯಾಲಯಕ್ಕೆ ವರ್ಗಾವಣೆಗೊಂಡಿರುತ್ತದೆ ಎಂದರೆ ಸರಿ. ಈ ದಾವೆಯು ನಾನು ಸರಿಯಾಗಿ ನಡೆಸದ ಕಾರಣ ವಜಾಗೊಂಡಿತ್ತು ಎಂದರೆ ಸರಿ. ಸದರಿ ದಾವೆಯನ್ನು ವಜಾಗೊಳಿಸಿದ ಆದೇಶವನ್ನು ತಳ್ಳಿಹಾಕಬೇಕು ಎಂದು ನಾನು ಮತ್ತೆ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ಅದೇ ರೀತಿ ಈ ದಾವೆಯನ್ನು ಪುನಃ ನ್ಯಾಯಾಲಯದಲ್ಲಿ ತೆಗೆದುಕೊಳ್ಳಲಾಯಿತು ಎಂದರೆ ಸರಿ.

2. ನಾನು ಆಸ್ತಿಯನ್ನು ಖರೀದಿಸುವುದು ಹಾಗೂ ಮಾರುವುದು ಈ ರೀತಿಯ ವ್ಯವಹಾರ ಮಾಡುತ್ತೇನೆ ಎಂದರೆ ಸರಿ. ಅದೇ ಕಾರಣಕ್ಕೆ ಬೇರೆ ಬೇರೆ ನ್ಯಾಯಾಲಯಗಳಲ್ಲಿ ನನಗೆ ಸೇರಿದ ಸುಮಾರು ದಾವೆಗಳು ಇರುತ್ತವೆ ಎಂದರೆ ಸರಿ. 1985 ರಲ್ಲಿ ನಾನು ಶ್ರೀ ರಾಘವೇಂದ್ರ ಕೋ ಆಪರೇಟಿವ ಹೌಸಿಂಗ ಸೊಸೈಟಿಯ ಸೆಕ್ರೆಟರಿ ಆಗಿದ್ದೆ ಎಂದರೆ ಸರಿ. ಈಗ ಸದರಿ ಸೊಸೈಟಿ ಅಸ್ತಿತ್ವದಲ್ಲಿ ಇರುವುದಿಲ್ಲ ಎಂದರೆ ಸರಿ. ಸದರಿ ಸೊಸೈಟಿ 2000 ನೇ ಇಸವಿಯಿಂದ ಕಾರ್ಯನಿರತ ಇರುವುದಿಲ್ಲ. ನಾನು ಈಗ ಸದರಿ ಸೊಸೈಟಿಯಲ್ಲಿ ಸೆಕ್ರೆಟರಿ ಆಗಿರುವುದಿಲ್ಲ.

3. ಈ ದಾವೆಯ ದಾವಾ ಸ್ವತ್ತು ಎಂದರೆ ಸರ್ವೆ ನಂಬರ 397/1 ರಲ್ಲಿ ಒಂದು ಎಕರೆ 8 ಗುಂಟೆ ಆಗಿರುತ್ತದೆ ಎಂದರೆ ಸರಿ. ಸದರಿ ಜಮೀನು ವ್ಯವಸಾಯಕ ಜಮೀನು ಆಗಿರುತ್ತದೆ. ಸದರಿ

ಜಮೀನಿನ ಚೆಕ್ಕುಬಂದಿ ಎಂದರೆ ಪೂರ್ವಕ್ಕೆ ಬಸ್ತಿಯ ಜಾಗ, ಪಶ್ಚಿಮಕ್ಕೆ ಸುನಗಾರ ರವರ ಜಾಗ, ಉತ್ತರಕ್ಕೆ ನಾಲಾ ಹಾಗೂ ದಕ್ಷಿಣಕ್ಕೆ ಗಾಡಿ ಮಾರ್ಗ ಇರುತ್ತದೆ. ಸದರಿ ಜಮೀನು 1 ರಿಂದ 4ನೇ ಪ್ರತಿವಾದಿಯರಿಗೆ ಸೇರಿದ ಜಮೀನು ಆಗಿರುತ್ತದೆ ಎಂದರೆ ಸರಿ. ಸದರಿ ಜಮೀನು ಅವರಿಗೆ ಅವರ ತಂದೆಯಿಂದ ಬಂದ ಆಸ್ತಿಯಾಗಿರುತ್ತದೆ ಎಂದರೆ ಸರಿ. ದಿಃ 21-01-1994 ರಲ್ಲಿ 1 ರಿಂದ 4ನೇ ಪ್ರತಿವಾದಿಯರು ದಾವಾ ಸ್ವತ್ತನ್ನು 5 ರಿಂದ 8ನೇ ಪ್ರತಿವಾದಿಯರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಖರೀದಿ ಪತ್ರ ನೊಂದಣಿ ಆಗಿರುತ್ತದೆ ಎಂದರೆ ಸರಿ. ಸದರಿ ಖರೀದಿ ಪತ್ರ ಆದಾಗಿನಿಂದ ನನಗೆ ಅದರ ಕುರಿತು ಮಾಹಿತಿ ಇತ್ತು ಎಂದರೆ ಸರಿಯಲ್ಲ. ದಾವಾ ಸ್ವತ್ತು 5 ರಿಂದ 8ನೇ ಪ್ರತಿವಾದಿಯರ ಕಬ್ಜಾ ವಹಿವಾಟಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ.ಸಾಕ್ಷಿ ಮುಂದುವರೆದು ತಾನು ದಾವಾ ಸ್ವತ್ತಿನ ಕಬ್ಜೆಯಲ್ಲಿ ಇರುವುದಾಗಿ ನುಡಿಯುತ್ತಾರೆ. ದಾವಾ ಸ್ವತ್ತಿನ ಕಂದಾಯ ದಾಖಲೆಗಳಲ್ಲಿ 5 ರಿಂದ 8ನೇ ಪ್ರತಿವಾದಿಯರ ಹೆಸರು ನಮೂದಾಗಿರುತ್ತದೆ ಎಂದರೆ ಸರಿ. ಈ ದಾವೆ ದಾಖಲು ಮಾಡುವ ಸಮಯದಲ್ಲಿ ದಾವಾ ಸ್ವತ್ತು ನನ್ನ ಕಬ್ಜಾ ವಹಿವಾಟಿನಲ್ಲಿ ಇರುತ್ತದೆ ಎಂದು ನನ್ನ ವಕೀಲರಿಗೆ ತಿಳಿಸಿರುತ್ತೇನೆ. ವಾದಪತ್ರದಲ್ಲಿ ಅದರ ಕುರಿತು ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಅದರ ಬಗ್ಗೆ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿಯೂ ಸಹ ನಾನು ದಾವಾ ಸ್ವತ್ತಿನ ಕಬ್ಜೆಯಲ್ಲಿ ಇರುವ ಬಗ್ಗೆ ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಅದು ಕೈ ತಪ್ಪಿ ನಿಂದ ಆಗಿರಬಹುದು ಎಂದು ನುಡಿಯುತ್ತಾರೆ. ದಾವಾ ಸ್ವತ್ತು ನನ್ನ ಕಬ್ಜೆಯಲ್ಲಿ ಇರುತ್ತದೆ ಎಂದು ಮೊದಲ ಬಾರಿಗೆ ನಾನು ನ್ಯಾಯಾಲಯದ ಮುಂದೆ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಕಂದಾಯ ದಾಖಲೆಗಳಲ್ಲಿ 5 ರಿಂದ 8ನೇ ಪ್ರತಿವಾದಿಯರ ಹೆಸರುಗಳು ತಪ್ಪಿನಿಂದ ನಮೂದು ಮಾಡಲಾಗಿದೆ ಎಂದು ಅದನ್ನು ಪ್ರಶ್ನಿಸಿ ನಾನು ಇಲ್ಲಿಯವರೆಗೂ ಯಾವುದೇ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ.

4. ನಿಪಿ-2 ರ ಕ್ರಯದ ಕರಾರು ಪತ್ರದ ಸ್ಟಾಂಪ್ ಕಾಗದವನ್ನು ಯಾರು ಖರೀದಿಸಿದ್ದರು ಎಂದರೆ ನನ್ನ ಸಹಾಯಕರಾದ ದೇಸಾಯಿ ಎಂಬುವವರು ಖರೀದಿಸಿದ್ದರು. ಅದನ್ನು ಖರೀದಿಸಲು ಹಣವನ್ನು ನಾನೇ ಕೊಟ್ಟಿದ್ದೆ. ನಿಪಿ-2 ರ ಕರಾರು ಪತ್ರವನ್ನು ಮುಲ್ಲಾ ಎಂಬ ಬೆರಳಚ್ಚುಗಾರರಿಂದ ಶನಿವಾರ ಕೂಟದಲ್ಲಿ ತಯಾರಿಸಲಾಯಿತು. ಸದರಿ ಕರಾರು ಪತ್ರವನ್ನು 1985 ಇಸವಿಯ ಮೇ ತಿಂಗಳಿನಲ್ಲಿ ತಯಾರು ಮಾಡಲಾಯಿತು. ಸದರಿ ಕರಾರು ಪತ್ರ ಒಂದೇ ಶೀಟನಲ್ಲಿ ಇರುತ್ತದೆ. ಸದರಿ ಕರಾರು ಪತ್ರಕ್ಕೆ 1ನೇ ಪ್ರತಿವಾದಿಯ ಸಹಿ ಇರುತ್ತದೆ. ನಿಪಿ-2 ರ ಕರಾರು ಪತ್ರದಲ್ಲಿ ತಿದ್ದುಪಡಿಗೊಂಡ ಒಂದು ಜಾಗದಲ್ಲಿ ಹೊರತುಪಡಿಸಿ ಕರಾರು ಪತ್ರ ಮುಕ್ತಾಯಗೊಂಡ ನಂತರ 1ನೇ ಪ್ರತಿವಾದಿಯ ಸಹಿ ಇರುವುದಿಲ್ಲ. ನಿಪಿ-2 ರಲ್ಲಿ ಒಂದು ಕಡೆ ತಿದ್ದುಪಡಿ ಆಗಿದ್ದು ಅದನ್ನು ಸ್ವತಃ 1ನೇ ಪ್ರತಿವಾದಿಯೇ ತನ್ನ ಪೆನ್ನಿನಿಂದ ತಿದ್ದುಪಡಿ ಮಾಡಿರುತ್ತಾರೆ. ತಿದ್ದುಪಡಿಗೊಂಡ ಜಾಗಗಳಲೆಲ್ಲ 1ನೇ ಪ್ರತಿವಾದಿ ತನ್ನ ಸಹಿ ಮಾಡಿರುತ್ತಾರೆ. ಆ ರೀತಿ ನಿಪಿ-2 ರಲ್ಲಿ 3 ರಿಂದ 4 ಜಾಗಗಳಲ್ಲಿ 1ನೇ ಪ್ರತಿವಾದಿ ತಿದ್ದುಪಡಿ ಮಾಡಿರುತ್ತಾರೆ. ನಿಪಿ-2 ರಲ್ಲಿ ನನ್ನ ಪ್ರಕಾರ 4 ಜಾಗಕ್ಕೂ ಅಧಿಕ ಜಾಗಗಳಲ್ಲಿ 1ನೇ ಪ್ರತಿವಾದಿ ತಿದ್ದುಪಡಿ ಮಾಡಿರುವುದಿಲ್ಲ. 1985 ರ ಮೇ ತಿಂಗಳಿನಿಂದ ನಿಪಿ-2 ರ ಅಸಲು ದಾಖಲೆ ನನ್ನ ಬಳಿ ಇತ್ತು. ಅದರ ಪ್ರತಿಯನ್ನು 1ನೇ ಪ್ರತಿವಾದಿಗೆ ನೀಡಿದ ಬಗ್ಗೆ ನಾನು ಯಾವುದೇ ಹಿಂಬರಹವನ್ನು ಪಡೆದಿರುವುದಿಲ್ಲ. ನಿಪಿ-2 ರಲ್ಲಿ ಅದನ್ನು ಬರೆದ ನಂತರ ಕೊನೆಯದಾಗಿ 1ನೇ ಪ್ರತಿವಾದಿ ಏಕೆ ಸಹಿ ಮಾಡಿರುವುದಿಲ್ಲ ಎಂದರೆ ಸಾಕ್ಷಿ ಅದು ಕೈ ತಪ್ಪಿನಿಂದ ಬಿಟ್ಟಿರಬಹುದು ಎಂದು ನುಡಿಯುತ್ತಾರೆ. ಆ ರೀತಿ ಕೈ ತಪ್ಪಿನಿಂದ 1ನೇ ಪ್ರತಿವಾದಿ ನಿಪಿ-2 ಕ್ಕೆ ಸಹಿ ಮಾಡದೇ ಇರುವುದನ್ನು ನಾನು ಈ ದಾವೆ ಹೂಡುವ ಸಮಯದಲ್ಲಿ ನೋಡಿದ್ದೆ, ಅದಕ್ಕೂ ಮೊದಲು ಅದನ್ನು ನೋಡುವ ಸಂದರ್ಭ ಬಂದಿರುವುದಿಲ್ಲ. ಈ ದಾವೆಯನ್ನು 1996 ರಲ್ಲಿ ಹೂಡುವ ಮೊದಲು ನನಗೆ ಈ ವಿಚಾರದ ಬಗ್ಗೆ ಮಾಹಿತಿ ಇರಲಿಲ್ಲ. ನನಗೆ ಸದರಿ ವಿಚಾರದ ಬಗ್ಗೆ 1996 ರ ಫೆಬ್ರವರಿ ಅಥವಾ ಮಾರ್ಚ ತಿಂಗಳಿನಲ್ಲಿ ತಿಳಿಯಿತು. ಅದರ ಬಗ್ಗೆ ನಾನು ತಿಳಿದುಕೊಂಡ ನಂತರ 1ನೇ ಪ್ರತಿವಾದಿಗೆ

ಲಿಖಿತವಾಗಿ ಯಾವುದೇ ಪತ್ರ ಬರೆದಿರುವುದಿಲ್ಲ. ಸಾಕ್ಷಿ ಮುಂದುವರೆದು ತಾನು ಮೌಖಿಕವಾಗಿ 1ನೇ ಪ್ರತಿವಾದಿಗೆ ಹೇಳಿದ್ದರು ಎಂದು ನುಡಿಯುತ್ತಾರೆ. ಈ ದಾವೆಯ ವಾದಪತ್ರ ಸಲ್ಲಿಸುವ ಸಮಯದಲ್ಲಿ ನಿಪಿ-2 ಕ್ಕೆ 1ನೇ ಪ್ರತಿವಾದಿ ಸಹಿ ಮಾಡದೇ ಇರುವುದು ನನಗೆ ತಿಳಿದಿತ್ತು. ಸದರಿ ವಿಚಾರವನ್ನು ವಾದಪತ್ರದಲ್ಲಿ ಏಕೆ ನಮೂದಿಸಿಲ್ಲ ಎಂದರೆ ಸಾಕ್ಷಿಯು ಅದು ಕಣ್ಣ್ತಪ್ಪಿ ನಿಂದ ಆಗಿರಬಹುದು ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ನಾನು ನನ್ನ ವಕೀಲರ ಗಮನಕ್ಕೆ ತಂದಿರಲಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ 1ನೇ ಪ್ರತಿವಾದಿ ನಿಪಿ-2 ಕ್ಕೆ ಸಹಿ ಮಾಡದೇ ಇರುವುದನ್ನು ಏಕೆ ನಮೂದಿಸಿಲ್ಲ ಎಂದರೆ ಅದು ಕಣ್ಣ್ತಪ್ಪಿ ನಿಂದ ಆಗಿರಬಹುದು ಎಂದು ನುಡಿಯುತ್ತಾರೆ. ನಿಪಿ-2 ನ್ನು ಬೆರಳಚ್ಚು ಮಾಡಿ ತಯಾರಿಸಿದ ನಂತರ ಮುಲ್ಲಾ ರವರು ಅದಕ್ಕೆ ಸಹಿ ಮಾಡಿರುವುದಿಲ್ಲ. ನಿಪಿ-2 ರ ಕರಾರು ಪತ್ರ ಮಾರ್ಚ 15, 1985 ರಲ್ಲಿ ಟೈಪ್ ಆಗಿತ್ತು. ಸಾಕ್ಷಿ ಮುಂದುವರೆದು 1985 ರ ಮೇ ತಿಂಗಳ ಮೊದಲು ನಿಪಿ-2 ತಯಾರಾಗಿತ್ತು ನಿಖರವಾಗಿ ದಿನಾಂಕ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-2 ರ ಕರಾರು ಪತ್ರ ಬೆರಳಚ್ಚು ಮಾಡುವ ಸಮಯದಲ್ಲಿ ನಾನು ಮತ್ತು 1ನೇ ಪ್ರತಿವಾದಿ ಮಾತ್ರ ಹಾಜರಿದ್ದೆವು ಬೇರೆ ಯಾರೂ ಸಹ ಇರಲಿಲ್ಲ. ನಿಪಿ-2 ನ್ನು ಬೆರಳಚ್ಚು ಮಾಡಲು ಉಕ್ತಲೇಖನವನ್ನು ನಾನು ಹಾಗೂ 1ನೇ ಪ್ರತಿವಾದಿ ನೀಡಿರುತ್ತೇವೆ. 1ನೇ ಪ್ರತಿವಾದಿಗೆ ಸ್ವತ್ತಿನ ಸರ್ವೆ ನಂಬರ ನಿಪಿ-2 ನ್ನು ತ ಯಾರಿಸುವ ಸಂದರ್ಭದಲ್ಲಿ ಗೊತ್ತಿತ್ತು. ನಿಪಿ-2 ನ್ನು ಬೆರಳಚ್ಚು ಮಾಡಿದ ದಿನವೇ ಅದರಲ್ಲಿ 1ನೇ ಪ್ರತಿವಾದಿ ತಿದ್ದುಪಡಿಗಳನ್ನು ಮಾಡಿರುತ್ತಾರೆ. ಆ ರೀತಿ ತಿದ್ದುಪಡಿ ಆದ ನಂತರ ನಿಪಿ-2 ನ್ನು ಪುನಃ ಬೆರಳಚ್ಚು ಮಾಡಿಸಲು ತೊಂದರೆ ಇರಲಿಲ್ಲ. ಸಾಮಾನ್ಯವಾಗಿ ಒಂದು ದಾಖಲೆಯಲ್ಲಿ ಬಹಳ ತಿದ್ದುಪಡಿಗಳಾದರೆ ಅದನ್ನು ಪುನಃ ಬೆರಳಚ್ಚು ಮಾಡಿಸಲಾಗುತ್ತದೆ ಎಂದರೆ ಸಾಕ್ಷಿ ಅದರ ಕುರಿತು ತನಗೆ ಹೇಳಲು ಆಗುವುದಿಲ್ಲಎಂದು ನುಡಿಯುತ್ತಾರೆ. ನಿಪಿ-2 ರ ಕರಾರು ಪತ್ರ ಮೇ ತಿಂಗಳ 22ನೇ ತಾರೀಕಿಗೂ ಮೊದಲು ತಯಾರಾಗಿದ್ದು ಸದರಿ ದಾಖಲೆಗೆ 22 ಮೇ 1985 ರಂದು 2

ರಿಂದ 4ನೇ ಪ್ರತಿವಾದಿಯರು ಹಾಗೂ ಸಾಕ್ಷಿದಾರರು ಸಹಿ ಮಾಡಿರುತ್ತಾರೆ. ನಿಪಿ-2 ಕರಾರು ಪತ್ರಕ್ಕೆ ನಾನೂ  ಸಹಿ ಮಾಡಿರುತ್ತೇನೆ. ನಾನು ಈಗ ನಿಪಿ-2 ಕರಾರು ಪತ್ರ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುವುದಿಲ್ಲ. ನಿಪಿ-2 ಕ್ಕೆ ನಾನು ಸಹಿ ಮಾಡಿರುವುದಿಲ್ಲ ಎಂದು ನನ್ನ ವಕೀಲರಿಗೆ ನಾನು ಹೇಳಿರುವುದಿಲ್ಲ ಹಾಗೂ ಅದರ ಬಗ್ಗೆ ವಾದಪತ್ರದಲ್ಲಾಗಲೀ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಾಗಲೀ ನಮೂದು ಮಾಡಿರುವುದಿಲ್ಲ.  ನಿಪಿ-2 ರ ಕರಾರುಪತ್ರ ದ್ವಿಪಕ್ಷೀಯ (bilateral agreement) ಕರಾರು ಪತ್ರ ಆಗಿತ್ತು, ಅದು ಏಕಪಕ್ಷೀಯ (Unilateral agreement) ಕರಾರು  ಪತ್ರ ಆಗಿರಲಿಲ್ಲ. ದ್ವಿ ಪಕ್ಷಿಯ ಕರಾರು ಪತ್ರದಲ್ಲಿ ಎರಡೂ ಪಕ್ಷಗಾರರ ಸಹಿ ಇರುತ್ತದೆ ಎಂದರೆ ಸರಿ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಬೆಳಗಾವಿ.**